ಶ್ರೀ ವೀರಕುಮಾರ್ ಅಪ್ಪಾಸೋ ಪಾಟೀಲ್ (ವಿದ್ಯುತ್ ಖಾತೆ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಹಿಂದೆ ಮಾಜಿ ಸಚಿವರು ಕೊಟ್ಟಂಥ ಭರವಸೆಯ ಪ್ರಕಾರವೇ ಕೆ.ಪಿ.ಟಿ.ಸಿ.ಎಲ್. ಕಾರ್ಯಪ್ರವೃತ್ತವಾಗಿದೆ. ಯಾವ ಯಾವ ರೈತರು ಡಿಸ್‌ಕನೆಕ್ಷನ್ ಸಲುವಾಗಿ ಅರ್ಜಿಯನ್ನು ಕೊಟ್ಟಿದ್ದಾರೋ ಆ ಪ್ರಕಾರ ಡಿಸ್‌ಕನೆಕ್ಷನ್ ಆಗಿದೆ. 23500 ಬಾವಿಗಳಲ್ಲಿ ನೀರಿಲ್ಲವೆಂದು ನಮ್ಮ ಅಧಿಕಾರಿಗಳು ಐಡೆಂಟಿಫೈ ಮಾಡಿದ್ದಾರೆ. ಅವುಗಳಿಗೆ ಡಿಸ್‌ಕನೆಕ್ಷನ್ ಹಾಗೂ ಬಿಲ್ ಮನ್ನಾ ಮಾಡುವ ಬಗ್ಗೆ ಯಾವ ಪ್ರಕಾರ ಈ ಸದನದಲ್ಲಿ ಮಾಜಿ ಸಚಿವರು ಭರವಸೆ ಕೊಟ್ಟಿದ್ದಾರೋ ಆ ಪ್ರಕಾರ ಮನ್ನಾ ಮಾಡಲಾಗುವುದು.

ಶ್ರೀ ಸಿ. ಬೈರೇಗೌಡ : ಅಧ್ಯಕ್ಷರೆ, ಕೇವಲ 23 ಸಾವಿರ ಬಾವಿಗಳಲ್ಲಿ ನೀರಿಲ್ಲವೆಂದಿದ್ದಾರೆ. ಆದರೆ ನನ್ನ ಲೆಕ್ಕದ ಪ್ರಕಾರ ರಾಜ್ಯದಲ್ಲಿ ಇಂಥವು ಒಂದು ಲಕ್ಷಕ್ಕೂ ಹೆಚ್ಚು ತೆರೆದ ಬಾವಿಗಳಿವೆ. ಅಲ್ಲಿಯ ರೈತರು ಒಂದು ಪೈಸೆಯಷ್ಟು ಕೂಡ ವಿದ್ಯುತನ್ನು ಬಳಸಿಲ್ಲ. ಆದುದರಿಂದ ಬತ್ತಿ ಹೋಗಿರುವ ಎಲ್ಲಾ ತೆರೆದ ಬಾವಿಗಳಲ್ಲಿ ವಿದ್ಯುತ್ ಸಂಪರ್ಕ ಏನು ಹೊಂದಿದ್ದರೋ ಅಲ್ಲಿ ಇಪ್ಪತ್ತು ವರ್ಷಗಳ ಹಿಂದೆಯೇ ಡಿಸ್‌ಕನೆಕ್ಟ್ ಆಗಬೇಕಾಗಿತ್ತು. ಆದುದರಿಂದ ಅಸಲು ಬಡ್ಡಿ ಮತ್ತು ಸುಸ್ತಿ ಬಡ್ಡಿಯೆಲ್ಲವನ್ನೂ ವಜಾ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ದಯವಿಟ್ಟು ಮಾನ್ಯ ಸಚಿವರು ಹೇಳಬೇಕು.

ಶ್ರೀ ವೀರಕುಮಾರ್ ಅಪ್ಪಾಸೋ ಪಾಟೀಲ್ : ಅಧ್ಯಕ್ಷರೆ, ಆ ತೆರೆದ ಬಾವಿಯಲ್ಲಿ ನೀರಿಲ್ಲವೆಂದು ವಿಲೇಜ್ ಅಕೌಂಟೆಂಟ್‌ನಿಂದ ದಾಖಲೆ ತಂದರೆ ನಾವು ಎಲ್ಲವನ್ನು ಮನ್ನಾ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ : ಈ ಭರವಸೆಯನ್ನು ಸಚಿವರು ಇಂದು ಕೊಟ್ಟಿದ್ದಾರೆ. ಇದು ಯಾವ ರೀತಿಯಲ್ಲಿ ಕಾರ್ಯಗತವಾಗುತ್ತದೆಂದು ನೋಡೋಣ. ಸದನದಲ್ಲಿ ಮಾನ್ಯ ಸಚಿವರು ಕೊಟ್ಟ ಭರವಸೆಗೆ ಧನ್ಯವಾದಗಳು.

ಗಮನ ಸೆಳೆಯುವ ಸೂಚನೆ

ಬೆಂಗಳೂರು ವೈದ್ಯಕೀಯ ಕಾಲೇಜಿನ ಹಾಸ್ಟೆಲ್‌ನಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಬಗ್ಗೆ

ಶ್ರೀ ಪಿ.ಸಿ. ಮೋಹನ್ : ಮಾನ್ಯ ಅಧ್ಯಕ್ಷರೆ, ಬೆಂಗಳೂರು ವೈದ್ಯಕೀಯ ಕಾಲೇಜಿನ ಹಾಸ್ಟೆಲ್‌ನಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇರುವ ಬಗ್ಗೆ ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರ ಗಮನವನ್ನು ನಾನು ಸೆಳೆಯ ಬಯಸುತ್ತೇನೆ.

ಶ್ರೀಮತಿ ನಫೀಸ್ ಫಜಲ್ (ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) : ಬೆಂಗಳೂರು ಸರ್ಕಾರಿ ವೈದ್ಯಕೀಯ ಕಾಲೇಜಿನ ಪದವಿ ವಿದ್ಯಾರ್ಥಿನಿಲಯದಲ್ಲಿ ಕೆಲವು ಮೂಲಭೂತ ಸೌಲಭ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ವಿದ್ಯುತ್ ಬಾಕಿ ರೂ. 3,69,390.00 ಮತ್ತು ನೀರಿನ ಬಾಕಿ ರೂ. 1,65,406.00ಗಳನ್ನು ಪಾವತಿ ಮಾಡಲಾಗಿದೆ. ಇಲ್ಲಿ ಹೊಸ ಬಣ್ಣದ ಟೆಲಿವಿಷನ್ ಒದಗಿಸಲಾಗಿದೆ ಮತ್ತು ಅಗತ್ಯವಿರುವ ದುರಸ್ಥಿ ಕೆಲಸಗಳನ್ನು ರೂ. 25 ಲಕ್ಷಗಳ ವೆಚ್ಚದಲ್ಲಿ ಮಾಡಲು ಮಂಜೂರಾತಿ ನೀಡಲಾಗಿದೆ.

ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ) : ಮಾನ್ಯ ಅಧ್ಯಕ್ಷರೆ, ಇಷ್ಟು ವರ್ಷಗಳಿಂದ ಬೆಂಗಳೂರು ವೈದ್ಯಕೀಯ ಕಾಲೇಜಿನ ಆವರಣದಲ್ಲಿ ಮೂಲಭೂತ ಸೌಕರ್ಯಗಳು ಇಲ್ಲದೆ ವಿದ್ಯಾರ್ಥಿಗಳು ಈ ಸ್ಥಳದಲ್ಲಿ ಇದ್ದರು ಮತ್ತು ಇರಬೇಕಾಗಿತ್ತು. ಒಟ್ಟು 174 ವಿದ್ಯಾರ್ಥಿಗಳು ಇರುವ ಈ ಹಾಸ್ಟೆಲ್‌ನಲ್ಲಿ ತಿಂಗಳಿಗೆ ಒಂದು ಸಾವಿರ ಫೀಜ್ ಎಂದು ಕಲೆಕ್ಟ್ ಮಾಡಿದಾಗ ಒಟ್ಟು ಒಂದು ಲಕ್ಷ ಎಪ್ಪತ್ತುನಾಲ್ಕು ಸಾವಿರ ರೂಪಾಯಿ ಆದರೂ ಕೂಡ ವಿದ್ಯುತ್ ಬಾಕಿ ಹಾಗೂ ನೀರಿನ ಬಾಕಿ ಉಳಿಸಿಕೊಂಡು ಹೋಗಿ ಆ ಹಣ ಅವ್ಯವಹಾರವಾಗಿದೆಯಾ ಎನ್ನುವುದರ ಬಗ್ಗೆ ವಿವರ ಕೊಡಬೇಕು. ಮತ್ತು ಮಾನ್ಯ ಸಚಿವರು 25 ಲಕ್ಷ ರೂಪಾಯಿ ಸ್ಯಾಂಕ್ಷನ್ ಆಗಿದೆಯೆಂದು ಹೇಳಿದರು. ಅದು ಯಾವಾಗ ಹಾಗೂ ಯಾವ್ಯಾವ ಕಾಮಗಾರಿಗೆ ಆ ಹಣವನ್ನು ಉಪಯೋಗಿಸುತ್ತಿದ್ದೀರಿ? ಮತ್ತು ಈ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡುತ್ತೀರೆಂದು ತಿಳಿಸಬೇಕು.

ಶ್ರೀಮತಿ ನಫೀಸಾ ಫಜಲ್ : ಮಾನ್ಯ ಅಧ್ಯಕ್ಷರೆ, ಇಂದಿನ ಪದ್ಧತಿ ಪ್ರಕಾರ ಪ್ರತಿ ತಿಂಗಳು ಪ್ರತಿಯೊಬ್ಬ ವಿದ್ಯಾರ್ಥಿ ಮೆಸ್ ಬಿಲ್ ಹಾಗೂ ಸಿಬ್ಬಂದಿ ವೆಚ್ಚಕ್ಕೋಸ್ಕರ ಒಂದು ಸಾವಿರ ರೂಪಾಯಿ ಕೊಡುತ್ತಿದ್ದರು. ಮೆಸ್ ಬಿಲ್ ಹೆಚ್ಚಿಗೆಯಾಗಿ ವಿದ್ಯುತ್ ಮತ್ತು ನೀರಿನ ಬಿಲ್ ಕಟ್ಟುವುದಕ್ಕೆ ದುಡ್ಡು ಉಳಿಯಲಿಲ್ಲ. ಆದರೆ ಒಂದು ವರ್ಷದಿಂದ ವಿದ್ಯಾರ್ಥಿಗಳೇ ಖುದ್ದಾಗಿ ಹಾಸ್ಟೆಲ್‌ನ ಆಡಳಿತ ನಿರ್ವಹಣೆ ಮಾಡುತ್ತಿದ್ದಾರೆ. ಸಧ್ಯಕ್ಕೆ ಪ್ರತಿ ಆರು ತಿಂಗಳಿಗೆ ಒಬ್ಬ ವಿದ್ಯಾರ್ಥಿ 45 ರೂಪಾಯಿಗಳನ್ನು ಮಾತ್ರ ರೂಮು ರೆಂಟ್ ಎಂದು ಸರ್ಕಾರಕ್ಕೆ ಕೊಡುತ್ತಿದ್ದು ಅದನ್ನು ನಾವು ಲೋಕೋಪಯೋಗಿ ಇಲಾಖೆಗೆ ಕೊಡುತ್ತೇವೆ. ಅಲ್ಲದೆ ಮೇನ್‌ಟೆನನ್ಸ್ ಮತ್ತು ಎಕ್ಸ್‌ಪೆಂಡಿಚರ್‌ಗೋಸ್ಕರ ಪ್ರತಿ ತಿಂಗಳು ಒಬ್ಬ ವಿದ್ಯಾರ್ಥಿಯಿಂದ ನಾವು 33 ರೂಪಾಯಿ ತೆಗೆದುಕೊಳ್ಳುತ್ತಿದ್ದೇವೆ. ಬೇರೆ ಖರ್ಚುಗಳನ್ನೆಲ್ಲಾ ಸ್ಟೂಡೆಂಟ್ಸ್ ಯೂನಿಯನ್ ರಚನೆ ಮಾಡಿ ಅವರೇ ನೋಡಿಕೊಳ್ಳುತ್ತಾರೆ. ಈಗ ನಮ್ಮ ಸರ್ಕಾರದ ಕೈಯಲ್ಲಿ ಏನೂ ಇಲ್ಲ. ತಾವು, ವಿದ್ಯಾರ್ಥಿಗಳು ಇಷ್ಟೆಲ್ಲಾ ದುಡ್ಡು ಕೊಟ್ಟಮೇಲೆ ಏಕೆ ವಿದ್ಯುತ್ ಹಾಗೂ ನೀರಿನ ಬಾಕಿ ಹಾಗೆ ಉಳಿದಿದೆ ಎಂದು ಕೇಳಿದಿರಿ. ಮೆಸ್ ಬಿಲ್ ಜಾಸ್ತಿ ಖರ್ಚು ಬರುತ್ತಿರುವುದರಿಂದ ದುಡ್ಡು ಉಳಿಯುತ್ತಿರಲಿಲ್ಲ. ಈಗ ಅವರೇ ನಡೆಸುತ್ತಾರೆ. ಮೆಸ್ ಬಿಲ್, ವಿದ್ಯುತ್ ಬಿಲ್ ಎಲ್ಲಾ ಅವರೇ ಕೊಡುತ್ತಾರೆ. ಇನ್ನು ತಾವು ಮೂಲಭೂತ ಸೌಕರ್ಯಗಳ ಬಗ್ಗೆ ಏನು ಮಾಡುತ್ತಿದ್ದೀರಿ ಎಂದು ಕೇಳಿದಿರಿ. ಬಾತ್‌ರೂಂ ಸರಿ ಮಾಡಿಸಿ ಜಿಮ್ನಾಷಿಯಂ ರೂಂ ಮಾಡಿದ್ದೇವೆ. ಎಲೆಕ್ಟ್ರಿಕಲ್ ರೀವೈರಿಂಗ್ ಮಾಡಿದ್ದೇವೆ. ವಾಶ್ ಬೇಸಿನ್ ಒಡೆದಿತ್ತು. ನಾನು ಮಂತ್ರಿಯಾದ ಮೇಲೆ ಅಲ್ಲಿ ಹೋಗಿ ನೋಡಿದೆ. ಕನ್ನಡಿ ಇರಲಿಲ್ಲ. ವಿದ್ಯಾರ್ಥಿಗಳಿಗೆ ಏನೂ ಸವಲತ್ತುಗಳು ಇರಲಿಲ್ಲ. ನನಗೆ ನೋಡಿ ನಾಚಿಕೆಯಾಯಿತು. ಈಗ ಎಲ್ಲಾ ಸುಧಾರಣೆ ಮಾಡಿದ್ದೇನೆ. ನಮ್ಮ ಸರ್ಕಾರದಿಂದ ಏಳು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದ್ದೇವೆ. ಇನ್ನು 25 ಲಕ್ಷ ರೂಪಾಯಿ ಮಂಜೂರಾಗುತ್ತಿದೆ.

ಅಧ್ಯಕ್ಷರು : ಕೆ.ಬಿ. ಮಲ್ಲಿಕಾರ್ಜುನ್, ತಾವು ಶೂನ್ಯವೇಳೆಯಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದಿರಿ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ.